**4664 (4504) ಶ್ರೀ ಪಾಟೀಲ್ ಡಿ. ಆರ್. (ಗದಗ್)** :– ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಹೆಚ್.ಡಿ.ಸಿ.ಯಿಂದ ರಾಜ್ಯ ಸರ್ಕಾರ ಎಷ್ಟು ಮೌಲ್ಯದ ಬಟ್ಟೆ ಖರೀದಿಸಿದೆ; ಇದರಲ್ಲಿ ಬೇರೆ ಬೇರೆ ಇಲಾಖೆಗಳ ಪಾಲು ಎಷ್ಟು;

ಆ) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಒಟ್ಟು ಬಟ್ಟೆ ಬೇಡಿಕೆ ಎಷ್ಟು;

ಇ) ಇದರಲ್ಲಿ ಎಷ್ಟು ಪ್ರಮಾಣ ಕೆ.ಹೆಚ್.ಡಿ.ಸಿ. ಒದಗಿಸುತ್ತಿದೆ;

ಈ) ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳ ಬಟ್ಟೆ ಬೇಡಿಕೆ ಪೂರೈಸಲು ಏಕೆ ಸಾಧ್ಯವಾಗುತ್ತಿಲ್ಲ;

ಉ) ಸಮರ್ಥವಾಗಿದ್ದಲ್ಲಿ ಎಲ್ಲ ಇಲಾಖೆಗಳ ಬಟ್ಟೆ ಬೇಡಿಕೆ ಪೂರೈಸಲು ಏಕೆ ಸಾಧ್ಯವಾಗುತ್ತಿಲ್ಲ;

ಊ) ಒಂದು ವೇಳೆ ರಾಜ್ಯ ಸರ್ಕಾರ ತೆಗೆದುಕೊಳ್ಳಬೇಕಾದ ಎಲ್ಲ ಬಟ್ಟೆಗಳನ್ನು ಕೆ.ಹೆಚ್.ಡಿ.ಸಿ.ಯಿಂದಲೇ ಖರೀದಿಸಿದರೆ ಇನ್ನೂ ಎಷ್ಟು ನೇಕಾರರಿಗೆ ಉದ್ಯೋಗ ಒದಗಿಸಬಹುದು?

**ಡಾ॥ ಹೆಚ್. ಮಹದೇವಪ್ಪ (ಜವಳಿ ರಾಜ್ಯ ಸಚಿವರು)** :

ಅ) ಕಳೆದ ವರ್ಷ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಿಗೆ/ಯೋಜನೆಗಳಡಿ ರೂ.46.60 ಕೋಟಿಗಳಷ್ಟು ಬಟ್ಟೆಯನ್ನು ಸರಬರಾಜು ಮಾಡಿದೆ. ಇದರಲ್ಲಿ ಸರ್ಕಾರದ ಇಲಾಖೆಗಳು/ಇತರೆ ಇಲಾಖೆಗಳು ಮತ್ತು ಯೋಜನೆಗಳಡಿ ಸರಬರಾಜು ಮಾಡಿದ ಶೇಕಡಾವಾರು ವಿವರ ಕೆಳಗಿನಂತಿದೆ:

| | |
|---|---|
| 1) ವಿದ್ಯಾವಿಕಾಸ ಯೋಜನೆ | 72% |
| 2) ಅಗ್ಗದರದ ಸೀರೆ ಪಂಚೆಯೋಜನೆ | 8% |
| 3) ಸರ್ಕಾರದ/ಇತರೆ ಇಲಾಖೆಗಳು | 20% |

ಆ) ಸುಮಾರು ರೂ.120 ಕೋಟಿ ಮೌಲ್ಯದ ಬಟ್ಟೆ ಸರ್ಕಾರದ ವಿವಿಧ ಇಲಾಖೆ/ಯೋಜನೆಗಳಿಗೆ ಬೇಕಾಗುತ್ತದೆ.

ಇ) ರೂ.50.00 ಕೋಟಿ ಮೌಲ್ಯದ ಬಟ್ಟೆಯನ್ನು ನಿಗಮವು ಸರಬರಾಜು ಮಾಡುತ್ತಿದೆ.

ಈ) ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳ ಬಟ್ಟೆ ಬೇಡಿಕೆ ಪೂರೈಸಲು ಕೆ.ಹೆಚ್.ಡಿ.ಸಿ. ನಿಗಮವು ಸಮರ್ಥವಾಗಿದೆ.

ಉ) ಇಲಾಖೆಗಳ ಬೇಡಿಕೆಗಳಿಗನುಗುಣವಾಗಿ ನಿಗಮವು ಬಟ್ಟೆಗಳನ್ನು ಪೂರೈಸುತ್ತಿದೆ.

ಊ) ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು ನಿಗಮದಿಂದಲೇ ಬಟ್ಟೆಯನ್ನು ಖರೀದಿಸಿದಲ್ಲಿ ನಿಗಮವು ಇನ್ನೂ ಸುಮಾರು 10,000 ಕೈಮಗ್ಗ ನೇಕಾರರಿಗೆ ಉದ್ಯೋಗ ಒದಗಿಸಬಹುದು.

**4665 (5402) ಶ್ರೀ ರಘುಪತಿ ಭಟ್ ಕೆ. (ಉಡುಪಿ) :–** ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಡುಬಿ ಜನಾಂಗದವರಿಗೆ ಈ ಹಿಂದೆ ಪರಿಶಿಷ್ಟ ಪಂಗಡಕ್ಕೆ ಸೇರಿದವರೆಂದು ಜಾತಿ ಪ್ರಮಾಣ ಪತ್ರ ನೀಡಲಾಗುತ್ತಿತ್ತೆ;

ಆ) ಹಾಗಿದ್ದಲ್ಲಿ, ಯಾವಾಗ ಕೈ ಬಿಡಲಾಗಿದೆ ಮತ್ತು ಏಕೆ;

ಇ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಭೋವಿ ಜನಾಂಗದ ಶಾಲಾ ಮಕ್ಕಳಿಗೆ ಪರಿಶಿಷ್ಟ ಪಂಗಡ ಪ್ರಮಾಣ ಪತ್ರ ನೀಡಲು ಸರ್ಕಾರಿ ಕಛೇರಿಯಲ್ಲಿ ನಿರಾಕರಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ಈ ಸಂಬಂಧವಾಗಿ ಯಾವ ಕ್ರಮ ಕೈಗೊಂಡಿದೆ;

ಉ) ಕುಡುಬಿ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸರ್ಕಾರ ಆದೇಶ ಯಾವಾಗ ಹೊರಡಿಸಬಹುದು?

**ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :**

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಭೋವಿ ಜಾತಿಯು ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿರುವುದರಿಂದ ಪರಿಶಿಷ್ಟ ವರ್ಗದ ಜಾತಿ ಪ್ರಮಾಣ ಪತ್ರ ನೀಡಲು ಅವಕಾಶವಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಕುಡುಬಿ ಜನಾಂಗದವರನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆರವರು ಶಿಫಾರಸ್ಸು ಮಾಡಿರುತ್ತಾರೆ. ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗಕ್ಕೆ ಕಳುಹಿಸಿದ್ದು, ಆಯೋಗದ ವತಿಯಿಂದ ಶಿಫಾರಸ್ಸು/ವರದಿ ನಿರೀಕ್ಷಿಸಿದೆ.